## ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ.ನಂ.413/2021.**

ಪಿರ್ಯಾದಿ : ಸರ್ಕಾರ, ಕುಟ್ಟ ಪೋಲೀಸ್,

ವಿರುದ್ಧ

ಆರೋಪಿ :1. ಮಿದೇರಿರ ಪೂವಣ್ಣ ಮತ್ತು ಇತರರು,

**ದೋಷಾರೋಪಣೆ**

ಶ್ರೀ ಮತಿ ಕೆ.ಎಸ್., ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಯಾದ ನಾನು ಆರೋಪಿಗಳಾದ:

1. ಮಿದೇರಿರ ಪೂವಣ್ಣ,
   ತಂದೆಃ ಪೌತಿ ಅಯ್ಯಣ್ಣ,
   ಪ್ರಾಯಃ 38 ವರ್ಷ,
   ವಾಸಃ ಕೆ.ಬಾಡಗ ಗ್ರಾಮ, ಕುಟ್ಟ,
   ಕೊಡಗು.

2. ಶ್ರೀಮತಿ ತೊಯಸಿ,
   ಗಂಡಃ ಎಮ್.ಎ.ಪೂವಣ್ಣ,
   ಪ್ರಾಯಃ 31 ವರ್ಷ,
   ವಾಸಃ ಕೆ.ಬಾಡಗ ಗ್ರಾಮ, ಕುಟ್ಟ,
   ಕೊಡಗು.

3. ಶರಣ್,
   ತಂದೆಃ ಐ.ಎ.ಅಯ್ಯಪ್ಪ,
   ಪ್ರಾಯಃ 28 ವರ್ಷ,
   ವಾಸಃ ಬೀರುಗ ಗ್ರಾಮ, ಶ್ರೀಮಂಗಲ,
   ಕೊಡಗು.

ನಿಮ್ಮ ಮೇಲೆ ಹೊಸಲಾದ ದೋಷಾರೋಪಣೆ ಏನೆಂದರೆಃ

ದಿನಾಂಕ 13.11.2020 ರಂದು ಸಂಜೆ 6.00 ಗಂಟೆಗೆ ಕುಟ್ಟ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಕೆ.ಬಾಡಗ ಗ್ರಾಮದಲ್ಲಿ ಸಾಕ್ಷಿ 1 ಪೂವಣ್ಣ ಮತ್ತು ಸಾಕ್ಷಿ 2 ರವರ ಭಾಪ್ತು ವಾಸದ ಮನೆಯು ಪಿತ್ರಾರ್ಜಿತ ಆಸ್ತಿಯಾಗಿದ್ದು, ಸಾಕ್ಷಿ 1 ಮತ್ತು 2 ರವರು ಮನೆಗೆ ಬೀಗ ಹಾಕಿ ಪೊನ್ನಂಪೇಟೆಗೆ ತೆರಳಿದ್ದಾಗ ಆರೋಪಿಗಳಾದ ನೀವು ಸಮಾನೋದ್ದೇಶದಿಂದ ಒಂದುಗೂಡಿ ಸಾಕ್ಷಿ 1 ಮತ್ತು 2 ರವರ ಮನೆಗೆ ಅಕ್ರಮ ಪ್ರವೇಶ ಮಾಡಿರುವ ಮೂಲಕ ಭಾದ.ಸಂ.ಕಲಂ 448 ಜೊತೆಗೆ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭಗಳಲ್ಲಿ ಆರೋಪಿಗಳಾದ ನೀವು ಸಮಾನೋದ್ದೇಶದಿಂದ ಒಂದುಗೂಡಿ, ಸಾಕ್ಷಿ 2 ನೇತ್ರಾರವರು ಮನೆಗೆ ಬಂದು ಕೇಳಿದಾಗ, 1 ನೇ ಆರೋಪಿಯಾದ ನೀವು ಸಾಕ್ಷಿ 2 ರವರ ಕೈಯನ್ನು ಹಿಡಿದು ಎಳೆದಾಡಿ ಅವರ ಮಾನಕ್ಕೆ ಕುಂದುಂಟು ಮಾಡಿರುವ ಮೂಲಕ ಭಾ.ದ.ಸಂ.ಕಲಂ 354 ಜೊತೆಗೆ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭಗಳಲ್ಲಿ ಆರೋಪಿಗಳಾದ ನೀವು ಸಮಾನೋದ್ದೇಶದಿಂದ ಒಂದುಗೂಡಿ, 1 ನೇ ಆರೋಪಿಯಾದ ನೀವು ಸಾಕ್ಷಿ 2 ರವರ ಕೈಯನ್ನು ಹಿಡಿದು ಎಳೆದಾಡಿ ನೋವುಪಡಿಸಿ ತಳ್ಳಿದಾಗ ಅವರ ಬಲಕ್ಕೈನ ಮೊಣಕೈಗೆ ತರಚಿ ಸಾಮಾನ್ಯ ಸ್ವರೂಪದ ಗಾಯುವಾಗಿರುವ ಮೂಲಕ ಭಾ.ದ.ಸಂ.ಕಲಂ 323 ಜೊತೆಗೆ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

1/4/23

ದಿನಾಂಕ: ~~17.11.2022~~

ಸ್ಥಳ: ಪೊನ್ನಂಪೇಟೆ.

Poov...

Deechamma

...

A 1/4/2023

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ, ಪೊನ್ನಂಪೇಟೆ.